ISSN : 2581-7728
Tumbe International e-Magazine
A Multilanguage Magazine
Issue-1
Volume-5
Jan-June: 2022

# ಅಸಹಕಾರ ಚಳುವಳಿ (೧೯೨೦-೨೨)

**ರಕ್ಷಿತ ಎಂ**

U11GT21A0180
ಬಿಎ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
rakshir174@gmail.com
Ph.no: 7676213877

ರೌಲತ್ ಕಾಯ್ದೆಗಳು ಹಾಗೂ ಜಲಿಯನ್ ವಾಲಾಬಾಗ್ ದುರಂತಗಳು ಭಾರತೀಯರಲ್ಲಿ ಅರಸರ ಬಗ್ಗೆ ಪ್ರತಿಕಾರ ಭಾವನೆ ಮೂಡಿಸಿದವು. ಗಾಂಧೀಜಿ ಇವನ್ನು ಖಂಡಿಸಿ 1920ರಲ್ಲಿ ಅಸಹಕಾರ ಚಳುವಳಿಯನ್ನು ಆರಂಭಿಸಿದರು. 1921 ರಲ್ಲಿ ಗಾಂಧೀಜಿ ಬೆಂಗಳೂರಿಗೆ ಪ್ರಚಾರಕ್ಕಾಗಿ ಭೇಟಿ ನೀಡಿದ್ದರು. ಅವರೊಂದಿಗೆ ಆಲಿ ಸಹೋದರರಿದ್ದರು. ಗಾಂಧೀಜಿಯ ಕರೆಯಂತೆ ಕರ್ನಾಟಕದಲ್ಲಿ ಬೆಳಗಾವಿ, ಹುಬ್ಬಳ್ಳಿ, ಗದಗ, ಸಿರ್ಸಿ, ಸಿದ್ದಾಪುರ, ಹಾವೇರಿ, ಧಾರವಾಡ, ಅಂಕೋಲ ಮೊದಲಾದ ಕಡೆ ಅಸಹಕಾರ ಚಳುವಳಿ ಆರಂಭವಾಯಿತು. ವಿದ್ಯಾರ್ಥಿಗಳು ಸರ್ಕಾರಿ ಕಾಲೇಜುಗಳನ್ನೂ, ವಕೀಲರು ಕೋರ್ಟುಗಳನ್ನು ಬಹಿಷ್ಕರಿಸಿ ಚಳುವಳಿಗಿಳಿದರು. ಮದ್ಯಪಾನ ಅಂಗಡಿಗಳನ್ನು ಮುಚ್ಚಿದರು. ಹಲವಾರು ಖಾಸಗಿ ಶಾಲೆಗಳನ್ನು ತೆರೆದರು ಹಾಗೂ ವಿದೇಶಿ ವಸ್ತುಗಳನ್ನು ಸುಟ್ಟರು. ಸಭೆ, ಮೆರವಣಿಗೆ, ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್, ಬಹಿಷ್ಕಾರಗಳು ವ್ಯಾಪಕವಾಗಿ ನಡೆದವು. ಎಸ್ ಕೌಜಲಗಿ, ಆರ್ ಆರ್ ದಿವಾಕರ್, ಡಾ|| ಹರ್ಡಿಕರ್, ಜಿ ದೇಶಪಾಂಡೆ, ವೀರಪ್ಪವಾಲಿ, ನಾರಾಯಣರಾವ್ ಜೋಶಿ, ಆರ್ ಆರ್ ಕಾರಂತ, ಆಲೂರು ವೆಂಕಟರಾವ್, ಕೆ ಸದಾಶಿವರಾವ್, ನೀಲಕಂಠಪ್ಪ ಮೊದಲಾದ ಗಣ್ಯರು ಚಳುವಳಿಯಲ್ಲಿ ಭಾಗವಹಿಸಿದ್ದರು. ಅವರಲ್ಲಿ ಕೆಲವರು ವಕೀಲ ವೃತ್ತಿ ತೊರೆದರು. ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಬಂದಿಯಾದರು. ಗಂಗಾಧರ ದೇಶಪಾಂಡೆ ಬೆಂಗಳೂರಿನಲ್ಲಿ ಚರಕ ಸಂಘವನ್ನು ಸ್ಥಾಪಿಸಿದರು. "ಕರ್ನಾಟಕ ಗಾಂಧಿ" ಇಂದೇ ಹೆಸರಾದ ಹರ್ಡೀಕರ್ ಮಂಜಪ್ಪ ಖಾದಿ ಕುರಿತು ಪ್ರಚಾರ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಆಗಸ್ಟ್ 1921 ರಲ್ಲಿ ತಿಲಕರ ದಿನಾಚರಣೆ ಆಚರಿಸಿ ತಿಲಕರ ಸಾಧನೆಗಳನ್ನು ಸ್ಮರಿಸಿ ಪುಳಕಿತರಾದರು. ನಿಜಲಿಂಗಪ್ಪ, ಗಣೇಶ್ ರಾವ್ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ತಿಲಕರ ದಿನಾಚರಣೆ ಆಚರಿಸಿದರು. ಹುಬ್ಬಳ್ಳಿ ಮತ್ತು ಬೆಳಗಾನಹಳ್ಳಿ ಹರಿಜನ ಬಾಲಿಕಾಶ್ರಮಗಳನ್ನು ತೆರೆಯಲಾಯಿತು. 40 ರಾಷ್ಟ್ರೀಯ ಶಾಲೆಗಳನ್ನು ತೆರೆಯಲಾಯಿತು. ಕರ್ನಾಟಕ ಖಿಲಾಫತ್ ಪರಿಷತ್, ಮಹಿಳೆಯರ ಸಮಾವೇಶ, ಸಾಹಿತ್ಯ ಪರಿಷತ್ ಸಮಾವೇಶಗಳು ನಡೆದವು. ರಾಜಾಜಿ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಕರ್ನಾಟಕ ಪ್ರಾಂತೀಯ ಅಧಿವೇಶನ ನಡೆಯಿತು.

ಪೊಲೀಸರು ಅಸಹಕಾರ ಚಳುವಳಿಯನ್ನು ಹತ್ತಿಕ್ಕಲು ಗೋಲಿಬಾರ್ ಮಾಡಿದರು. ಧಾರವಾಡದ ಮಧ್ಯದ ಅಂಗಡಿಯ ಮುಂದೆ ಪಿಕೆಟಿಂಗ್ ಆಚರಿಸುತ್ತಿದ್ದವರ ಮೇಲೆ ಮಾಡಿದ ಪೊಲೀಸ್ ಗೋಲಿಬಾರ್ ನಲ್ಲಿ ಮೂವರು ಮೃತಪಟ್ಟರು. 29 ಮಂದಿ ಬಂಧಿಯಾದರು. ವೇಲ್ಸ್ ರಾಜಕುಮಾರ ಭಾರತಕ್ಕೆ ಭೇಟಿ ಕೊಟ್ಟಾಗ ಕರ್ನಾಟಕದ ವಿವಿಧಡೆ ಹರತಾಳದಲ್ಲಿ ಪೊಲೀಸರು ಗುಂಡು ಹಾರಿಸಿ ಇಬ್ಬರನ್ನು ಕೊಂದರು. ಚಳುವಳಿ ಕಾಲಕ್ಕೆ 70 ಜನ ಜೈಲು ಸೇರಿದರು. ಬೆಳಗಾವಿ,

ನಿಪ್ಪಾಣಿ, ಉಡುಪಿ, ಧಾರವಾಡ, ಮಂಗಳೂರು, ಶಿರಸಿ ಹಾಗೂ ಸಿದ್ದಾಪುರಗಳಲ್ಲಿ 50 ರಾಷ್ಟ್ರೀಯ ಶಾಲೆಗಳು ಸ್ಥಾಪನೆಯಾದವು. ಫೆಬ್ರುವರಿ 5, 1922 ಚೌರಿಚೌರ ದುರಂತದಿಂದಾಗಿ ಗಾಂಧೀಜಿ ಅಸಹಕಾರ ಚಳುವಳಿಯನ್ನು ರದ್ದುಪಡಿಸಿದರು.




1923ರಲ್ಲಿ ಡಾ||ಎನ್ ಎಸ್ ಹರ್ಡಿಕರ್ ಹುಬ್ಬಳ್ಳಿಯಲ್ಲಿ ಹಿಂದುಸ್ತಾನ್ ಸೇವಾದಳವನ್ನು ಸ್ಥಾಪಿಸಿ ಸುಮಾರು 17000 ಸ್ವಯಂಸೇವಕರನ್ನು ಸಂಘಟಿಸಿ ಗಾಂಧೀಜಿಗೆ ಒಪ್ಪಿಸಿದರು. ಇದು ಭಾರತದ ಸ್ವತಂತ್ರ ಚಳುವಳಿಗೆ ಕರ್ನಾಟಕ ನೀಡಿದ ಗಣ್ಯ ಕೊಡುಗೆಯಾಗಿದೆ. 1922 ಮತ್ತು 1924ರಲ್ಲಿ ಕರ್ನಾಟಕ ರಾಜಕೀಯ ಸಮ್ಮೇಳನಗಳು ಕ್ರಮವಾಗಿ, 2 ಮತ್ತು 3ನೇ ಸಮ್ಮೇಳನಗಳು ಮಂಗಳೂರು ಗೋಕರ್ಣಗಳಲ್ಲಿ ಎಸ್ ನಾಯ್ಡು ಮತ್ತು ದ್ವಾರಕನಾಥರ ಅಧ್ಯಕ್ಷತೆಯಲ್ಲಿ ನಡೆದವು. 1923ರಲ್ಲಿ ರಾಜಾಜಿ ನೇತೃತ್ವದಲ್ಲಿ ಬೆಳಗಾವಿಯಲ್ಲಿ ಪ್ರಾಂತೀಯ ಕಾಂಗ್ರೆಸ್ ಸಭೆ ಸೇರಿತ್ತು. ಸಂಸ್ಥಾನಗಳಲ್ಲಿ ಸ್ವಾತಂತ್ರ ಹೋರಾಟಕ್ಕೆ ಅವಕಾಶ ಇಲ್ಲವಾದ್ದರಿಂದ ಈ ಕಾಲಕ್ಕೆ 300ಕ್ಕೂ ಅಧಿಕ ಹೋರಾಟಗಾರರು ಬ್ರಿಟಿಷ್ ಪ್ರಾಂತ್ಯಗಳಿಗೆ (ಕಾರವಾರ) ಹೋಗಿ ಸ್ವತಂತ್ರ ಕ್ರಾಂತಿಯಲ್ಲಿ ಭಾಗವಹಿಸಿದರು.

ಧ್ವಜ ಸತ್ಯಾಗ್ರಹ ಮೈಸೂರು ಮಹಾರಾಜರು ಧ್ವಜಾರೋಹಣ ಮಾಡುವುದು ದೇಶದ್ರೋಹವೆಂದು ಆಜ್ಞೆ ಮಾಡಿದ್ದರು. ಇದನ್ನು ಪ್ರತಿಭಟಿಸಿ ಸಾವಿರಾರು ಸತ್ಯಾಗ್ರಹಿಗಳು ವಿ ಎಸ್ ನಾರಾಯಣರಾವ್ ನೇತೃತ್ವದಲ್ಲಿ ಪ್ರಾಂತ್ಯ ಕಾಂಗ್ರೆಸ್ ಅಡಿಯಲ್ಲಿ ಧ್ವಜ ಸತ್ಯಾಗ್ರಹ ನಡೆಸಿದರು. ಬೀದಿಬೀದಿಗಳಲ್ಲಿ ಅವರು ಧ್ವಜ ಹಿಡಿದು ಹೊರಟರು. ಪೊಲೀಸರು ಸತ್ಯಾಗ್ರಹಗಳನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು. ಚಳುವಳಿ 1923ರಲ್ಲಿ ನಾಲ್ಕು ತಿಂಗಳ ಕಾಲ ನಡೆಯಿತು. ಕೊನೆಗೆ ಸರಕಾರವೇ ಧ್ವಜಾರೋಹಣದ ಮೇಲೆ ಏರಿದ ನಿಷೇಧ ಹಿಂತೆಗೆದುಕೊಂಡಾಗಲೇ ಪ್ರತಿಭಟನೆ ನಿಂತಿತ್ತು.

**ಸತ್ಯಾಗ್ರಹ**

ಗಾಂಧಿಯವರ ಉದ್ದೇಶ ರಾಷ್ಟ್ರದಾದ್ಯಂತ ರೌಲತ್ ಕಾಯ್ದೆಗಳ ವಿರುದ್ಧ ಪ್ರದರ್ಶನ ಮಾಡುವುದಾಗಿತ್ತು. ಎಲ್ಲ ಆಫೀಸುಗಳು ಮತ್ತು ಫ್ಯಾಕ್ಟರಿಗಳು ಮುಚ್ಚಬೇಕು, ಬ್ರಿಟಿಷರ ಪೋಲೀಸ್ ಇಲಾಖೆ, ಸೇನೆ ಮತ್ತು ನಾಗರಿಕ ಸೇವೆಗಳಿಂದ ಮತ್ತು ಮಕ್ಕಳನ್ನು ಶಾಲೆಗಳಿಂದ ಹಿಂತೆಗೆಯಬೇಕು ಎಂಬ ಯೋಜನೆ ಹೊರಡಿಸಿದರು. ಅವರ ಇರಾದೆ ಕರ ವಿರೋಧ ಮಾಡುವುದಾಗಲೀ, ಶೀಘ್ರ ಸ್ವಾತಂತ್ರ್ಯಕ್ಕಾಗಿ ಆಗ್ರಹಿಸುವುದಾಗಲೀ, ಅಥವಾ ಹಿಂಸೆ ಮತ್ತು ಶಕ್ತಿ ಪ್ರದರ್ಶನ ಮಾಡುವುದಾಗಲೀ ಅಗಿರಲಿಲ್ಲ. ಪ್ರತಿ ಪ್ರದರ್ಶಕನೂ ಬಂಧಿತನಾಗಬೇಕು ಹಾಗೂ ಪೋಲೀಸರು ಹೊಡೆದರೆ ಹೊಡೆತ ಸಹಿಸಬೇಕೆ ಹೊರತು ತಿರುಗಿ ಹೊಡೆಯಬಾರದೆಂದು ಹಾಗೂ ಹಿಂದೂ-ಮುಸ್ಲಿಮ್ ಏಕತೆ ಕಾಪಾಡಬೇಕೆಂದು ಬಯಸಿದ್ದರು. ಗಾಂಧೀಜಿಯವರ ಈ ಯೋಜನೆಗಳನ್ನು ಹಿರಿಯ ಕಾಂಗ್ರೆಸ್ ನಾಯಕರು ತೀವ್ರವಾಗಿ ವಿರೋಧಿಸಿದರು. ಮುಸ್ಲಿಮ್ ಲೀಗ್ ಕೂಡ ಪ್ರತಿಭಟಿಸಿತು. ಆದರೆ ಭಾರತದ ಯುವ ಪೀಳಿಗೆ ಗಾಂಧಿಯವರ ಉದ್ದೇಶದಿಂದ ರೋಮಾಂಚನಗೊಂಡು ಅವರಿಗೆ ಬೆಂಬಲ ಸೂಚಿಸಿತು. ಇದರಿಂದ ಕಾಂಗ್ರೆಸ್ ಪಕ್ಷ ಮತ್ತು ಮುಸ್ಲಿಮ್ ಲೀಗ್ ತಮ್ಮ ವಿರೋಧ ಮರೆತು ಬೆಂಬಲ ಸೂಚಿಸಿದವು. ಗಾಂಧಿಯವರನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಅಧ್ಯಕ್ಷರಾಗಿ ೧೯೧೯ ಮತ್ತು ೧೯೨೦ರಲ್ಲಿ ಆರಿಸಲಾಯಿತು.

**ಪರಿಣಾಮಗಳು**

ರಾಷ್ಟ್ರೀಯ ದಂಗೆಯನ್ನು ಏಕಾಂತವಾಗಿ ನಿಲ್ಲಿಸಿದರೂ ಗಾಂಧಿಯವರನ್ನು ರಾಜದ್ರೋಹದ ಆರೋಪದ ಮೇಲೆ ಎರಡು ವರ್ಷಗಳ ಕಾಲ ಬಂಧಿಸಲಾಯಿತು. ಈ ಆಜ್ಞೆಯನ್ನು ಓದುವಾಗ ಬ್ರಿಟಿಷ್ ನ್ಯಾಯಾಧೀಶರು ಮೆಚ್ಚುಗೆ ಮತ್ತು ಅಭಿಮಾನಗಳಿಂದ ಮಾತಾಡಿ ಸರ್ಕಾರವು ಗಾಂಧಿಯವರನ್ನು ಬಿಡುಗಡೆಗೊಳಿಸಿದರೆ ತಮಗೆ ಅತೀವ ಸಂತೋಷವಾಗುವುದೆಂದು ಹೇಳಿದರು. ಬಹುತೇಕ ಕಾಂಗ್ರೆಸ್ ನಾಯಕರು ಗಾಂಧೀಜಿಗೆ ಬೆಂಬಲ ಸೂಚಿಸಿದರೂ ನಿರಾಶರಾದ ಕೆಲವರು ಅವರ ಸಂಗವನ್ನು ತ್ಯಜಿಸಿದರು. ಇವರಲ್ಲಿ ಪ್ರಮುಖರು ಅಲಿ ಸಹೋದರರು ಗಾಂಧಿಯವರನ್ನು ತೀವ್ರವಾಗಿ ಟೀಕಿಸಿದರು. ಮೋತಿಲಾಲ್ ನೆಹರು ಮತ್ತು ಚಿತ್ತರಂಜನ್ ದಾಸ್ ಸ್ವರಾಜ್ ಪಕ್ಷವನ್ನು ಹುಟ್ಟುಹಾಕಿದರು. ಬಹುತೇಕ ರಾಷ್ಟ್ರೀಯವಾದಿಗಳು ಚಳುವಳಿ ನಿಲ್ಲಿಸಿದ ಕಾರಣಕ್ಕೆ ಅಸಮ್ಮತಿ ತೋರಿಸಿ ಬಹಳ ದುಃಖಿತರಾದರು. ಇತಿಹಾಸಕಾರರ ಮತ್ತು ವಿಮರ್ಶಕರ ಪ್ರಕಾರ ಈ ಚಳುವಳಿಯು ಬ್ರಿಟಿಷ್ ಆಡಳಿತದ ಮೂಳೆ ಮುರಿಯುವಲ್ಲಿ ಸಾಕಷ್ಟು ಸಫಲವಾಯಿತು. ಬಹುಶಃ ೧೯೪೭ರ ವರೆಗೆ ಭಾರತೀಯರ ಹೋರಾಡಿದ ಸ್ವಾತಂತ್ರ್ಯಕ್ಕೆ ಇದರ ಕೊಡುಗೆಯೂ ಇತ್ತು. ಆದರೆ ಅನೇಕ ಇತಿಹಾಸಕಾರರು ಮತ್ತು ರಾಷ್ಟ್ರೀಯ ನಾಯಕರು ಗಾಂಧೀಜಿಯವರ ನಿರ್ಧಾರ ಸರಿಯಾದದ್ದೆಂದು ನಂಬುತ್ತಾರೆ. ಗಾಂಧೀಜಿಯವರು ಚಳುವಳಿಯನ್ನು ನಿಲ್ಲಿಸದೇ ಹೋಗಿದ್ದರೆ ಭಾರತವು ಬಂಡುಕೋರರ ದಂಗೆಯ ಮಟ್ಟಕ್ಕೆ ಇಳಿದುಹೋಗಿ ಸಾಮಾನ್ಯ ಜನರನ್ನು ದೂರ ಮಾಡುತ್ತಿತ್ತು. ಅಹಿಂಸೆಯ ತತ್ವವನ್ನು ಎತ್ತಿ ಹಿಡಿದಿದ್ದರಿಂದ ಎಷ್ಟೋ ಸಾಮಾನ್ಯ ನಾಗರಿಕರು ಹೆಮ್ಮೆಯಿಂದ ಮತ್ತು ಗೌರವಾತ್ಮಕವಾಗಿ ಸಾವು-ನೋವು ಮಾಡದೇ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಅನುವು ಮಾಡಿಕೊಟ್ಟಿತು.